**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01.**

ಸಂಖ್ಯೆ:ಸಿ4(3) ಪ್ರೌ.ಶಾ.ಶಿ ವಾ.ಕಾ.ನಿ.ವರದಿ 23/2016-17 ದಿನಾಂಕ.11-10-2017

**ಜ್ಞಾಪನ**

ವಿಷಯ:-ಸರ್ಕಾರಿ ಪ್ರೌಢಶಾಲಾ ಶಿಕ್ಷಕರುಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿ ನಿರ್ವಹಣೆ ಕುರಿತು.

ಉಲ್ಲೇಖ:-1.ಶ್ರೀ.ಶರಣಪ್ಪ ಮಟ್ಟೂರು ವಿಧಾನ ಪರಿಷತ್ತು ಸದಸ್ಯರು ಈಶಾನ್ಯ ಶಿಕ್ಷಕರ ಕ್ಷೇತ್ರ (ಕಲಬುರಗಿ) ಇವರ ಪತ್ರದ ದಿನಾಂಕ 22-8-2017

2.ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ(ರಿ) ಇವರ ಪತ್ರ ದಿನಾಂಕ:08.09.2017

3.ಸರ್ಕಾರದ ಆದೇಶ ಸಂಖ್ಯೆಇಡಿ569 ಡಿ.ಪಿ.ಎ2001 ಬೆಂಗಳೂರು ದಿನಾಂಕ:06.11.2001.

*********

MAHANTAGOUD T PATIL SWCM KSPSTA

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ 1 ಮತ್ತು 2 ರ ಪತ್ರದಲ್ಲಿ ಪ್ರೌಢಶಾಲಾ ಸಹ ಶಿಕ್ಷಕರ ವಾರ್ಷಿಕ ಕಾರ್ಯನಿರ್ವಹಣಾ ವರದಿಗೆ ಸಂಬಂಧಿಸಿದಂತೆ ಪುನರಾವಲೋಕನ ಪ್ರಾಧಿಕಾರ ಹಾಗೂ ಅಂಗೀಕಾರ ಮಾಡುವ ಪ್ರಾಧಿಕಾರಕ್ಕೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳೇ ಅಗತ್ಯ ಕ್ರಮ ವಹಿಸುವಂತೆ ನಿರ್ದೇಶನ ನೀಡುವ ಬಗ್ಗೆ ಮನವಿ ಮಾಡಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಉಲ್ಲೇಖಿತ(3) ರ ಸರ್ಕಾರದ ಆದೇಶದ ಪ್ರಕಾರ ಪ್ರತಿ ವರ್ಷದ ಅಂತ್ಯಕ್ಕೆ ಶಿಕ್ಷಕರುಗಳು ಕಾರ್ಯನಿರ್ವಹಣಾ ವರದಿಯ ಭಾಗ-1 & ಭಾಗ-2ನ್ನು ಭರ್ತಿಮಾಡಿ. ಸಂಬಂಧಿಸಿದ ಮುಖ್ಯಶಿಕ್ಷಕರಿಗೆ ಸಲ್ಲಿಸಬೇಕಾಗಿರುತ್ತದೆ. ತದನಂತರ ವರದಿ ಪ್ರಾಧಿಕಾರಿಗಳಾದ ಮುಖ್ಯಶಿಕ್ಷಕರು ಭಾಗ-3ನ್ನು ಭರ್ತಿಮಾಡಿ, ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ. ಹಾಗೂ ಪುನರಾವಲೋಕನ ಪ್ರಾಧಿಕಾರಿಗಳಾದ ಕ್ಷೇತ್ರಶಿಕ್ಷಣಾಧಿಕಾರಿಗಳು ಭರ್ತಿಮಾಡಿ, ಅಂಗೀಕಾರ ಪ್ರಾಧಿಕಾರಿಗಳಾದ ಉಪನಿರ್ದೇಶಕರು(ಆಡಳಿತ), ಇವರಿಗೆ ಕಾರ್ಯನಿರ್ವಹಣಾ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಉಪನಿರ್ದೇಶಕರು ಇವರು ತಮ್ಮ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲಾ ಶಿಕ್ಷಕರುಗಳ ಕಾರ್ಯನಿರ್ವಹಣಾ ವರದಿಯ ಅಂಗೀಕಾರ ಪ್ರಾಧಿಕಾರಿಗಳಾಗಿರುವುದರಿಂದ ಕಾಲಕಾಲಕ್ಕೆ ವಾರ್ಷಿಕ ಕಾರ್ಯನಿರ್ವಾಹಣಾ ವರದಿಯನ್ನು ಪಡೆದು ಕಛೇರಿಯಲ್ಲಿ ಸಂರಕ್ಷಿಸಬೇಕು. ಈ ನಡುವೆ ಮುಖ್ಯಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರುಗಳು ಬೇರೆ ಬೇರೆ ಸ್ಥಳಗಳಿಗೆ ವರ್ಗಾವಣೆ/ನಿವೃತ್ತಿ ಕಾರಣಗಳಿಂದ ಪ್ರೌಢಶಾಲಾ ಶಿಕ್ಷಕರು ಕಾರ್ಯನಿರ್ವಾಹಣಾ ವರದಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆದ್ದರಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪ್ರೌಢ ಶಾಲಾ ಶಿಕ್ಷಕರುಗಳ ಸೇವಾವಹಿಯನ್ನು ಪರಿಶೀಲಿಸಿ, ಪುನರಾವಲೋಕನ/ಅಂಗೀಕಾರ ಪ್ರಾಧಿಕಾರಿಗಳು ಶಿಕ್ಷಕರ ಸೇವಾ ವಹಿ ಹಾಗೂ ಪ್ರಸ್ತುತ ಶಿಕ್ಷಕರ ಕಾರ್ಯವನ್ನು ಪುನರಾವಲೋಕಿಸಿ, ಅಂಗೀಕರಿಸಿ ಸಹಿ ಮಾಡಲು ತಿಳಿಸಿದೆ.

ನಿರ್ದೇಶಕರು(ಪ್ರೌಢಶಿಕ್ಷಣ)

ಗೆ,

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ, ಧಾರವಾದ ಆಯುಕ್ತಾಲಯ ಇವರ ಮುಂದಿನ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಜಿಲ್ಲಾಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸೂಕ್ತ ಕ್ರಮಕ್ಕಾಗಿ.
3. ಶ್ರೀಶರಣಪ್ಪ ಮಟ್ಟೂರು ವಿಧಾನ ಪರಿಷತ್ ಸದಸ್ಯರು, ಈಶಾನ್ಯ ಶಿಕ್ಷಕರ ಕ್ಷೇತ್ರ (ಕಲಬುರಗಿ) ಶಾಸಕರ ಭವನ-1 ಕೊಠಡಿ ಸಂಖ್ಯೆ3&4, ಬೆಂಗಳೂರು ರವರಿಗೆ ಮಾಹಿತಿಗಾಗಿ.
4. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ, ಪ್ರಧಾನ ಕಛೇರಿ, 4ನೇ ಮುಖ್ಯ ರಸ್ತೆ, 5ನೇ ಅಡ್ಡರಸ್ತೆ, ರೈಲ್ವೆ ಸಮನಾಂತರ ರಸ್ತೆ, ಕುಮಾರಪಾರ್ಕ್ ಪಶ್ಚಿಮ ಬಡಾವಣೆ, ಶ್ರೀಸುಬ್ರಮಣ್ಯಸ್ವಾಮಿ ದೇವಸ್ಥಾನದ ರಸ್ತೆ, ಬೆಂಗಳೂರು ಇವರ ಮಾಹಿತಿಗಾಗಿ
5. ಕಛೇರಿಪ್ರತಿ.

D:\C-4(3\others-2017.doc

Scanned by CamScanner